BKN-02

Sl.No. :

Total No. of Pages : 3

ದ್ವಿತೀಯ ವರ್ಷದ ಬಿ.ಎ. ಪದವಿ ಪರೀಕ್ಷೆ, ಮೇ/ಜೂನ್- 2025

(SLM Scheme)

ಕನ್ನಡ ಭಾಷೆ (ಪತ್ರಿಕೆ–೨)

ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು

(ಪ್ರಾಚೀನ ಕನ್ನಡ ಕಾವ್ಯ, ಸಣ್ಣ ಕಥೆಗಳು, ಗದ್ಯ ಸಂಪದ, ವಿಮರ್ಶೆ)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳು ಕಡ್ಡಾಯ.*

ವಿಭಾಗ–ಎ

(ಪ್ರಾಚೀನ ಕನ್ನಡ ಕಾವ್ಯ) (20 ಅಂಕಗಳು)

ಪ್ರ1) ಒಂದರ ಭಾವವನ್ನು ಸಂದರ್ಭ ಸಹಿತ ವಿವರಿಸಿ. **[1×5=5]**

೧) ಕರಿದಾದೊಡೆ ಕತ್ತುರಿಯಂ
ಮುರುಡಾದೊಡೆ ಮಲಯಜಂಗಳು. ಕೊಂಕಿದೊಡೇಂ
ಸ್ಮರಚಾಪಮನಿಳಿಕಯ್ವರೆ.
ಮರುಳೇ ಪೊಲ್ಲಮೆಯ ಲೇಸು ನಲ್ಲನ ಮೆಯ್ಯೊಳ್.

೨) ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲ ಸಂಗಮದೇವ!

ಪ್ರ2) ಹತ್ತು ಪದಗಳಿಗೆ ಅರ್ಥ ಬರೆಯಿರಿ. **[10×½=5]**

ಪುಸಿ, ಅಡಗು, ಬಾಳ್, ವಸುಮತಿ, ಘಟ, ಅರ್ಕ, ತುರಗ, ಕಾದಲ, ಕುಕ್ಷಿ, ಜಲದಿ, ಚಾಪ, ಭವ, ಅಂಗ, ಬೆಂತರ.

ಪ್ರ3) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ. **[2×2½=5]**

೧) ಒಲವಾದೊಡೆ ರೂಪಿಸಿ ಕೋಟಲೆಯೇವುದೋ

೨) ನರಸುತ ನಿನ್ನೊರೆಗೆ ದೊರೆಗೆ ಗಂಡರು ಮೊಳರೆ

೩) ನಂದಿ ಮಹಾಕಾಳರಂ ಮರವುತಿರೆ ಶಂಕರಂ

೪) ಇದು ಎಲ್ಲಾ ನನ್ನ ದುರದೃಷ್ಟ ಶಿವನೆ

ಪ್ರ4) ಒಂದು ವಿಷಯಕ್ಕೆ ಟಿಪ್ಪಣಿ ಬರೆಯಿರಿ. **[1×5=5]**

೧) ಕಾಮಲತೆ ಕೈಲಾಸಕ್ಕೆ ಹೋಗಲು ಕಾರಣವೇನು?

೨) ಕರ್ಣ ಪರ್ವದ ವೈಶಿಷ್ಟ್ಯವನ್ನು ಜನಪದ ಮಹಾಭಾರತದ ನೆಲೆಯಲ್ಲಿ ತಿಳಿಸಿ.

ವಿಭಾಗ–ಬಿ

(ಪ್ರಾಚೀನ ಕನ್ನಡ ಕಾವ್ಯ, ಸಣ್ಣ ಕಥೆಗಳು) (30 ಅಂಕಗಳು)

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಕರ್ಣನ ಇತಿವೃತ್ತವನ್ನು ಕುರಿತು ಬರೆಯಿರಿ.

೨) ದುರ್ಯೋಧನ ಮತ್ತು ಕೃಷ್ಣನಿಗೆ ನಡೆದ ವಾಗ್ವಾದವನ್ನು ಕುರಿತು ಬರೆಯಿರಿ.

ಪ್ರ6) ಎರಡು ಪ್ರಶ್ನೆಗಳಿಗೆ ಉತ್ತರಿಸಿ. **[2×10=20]**

೧) ಹಳ್ಳಿಯ ಪರಿಸರದಲ್ಲಿ ವೆಂಕಟಶಾಮಿಯ ಪ್ರಣಯ ವಿಫಲಗೊಳ್ಳಲು ಕಾರಣವೇನು? ವಿಮರ್ಶಿಸಿ.

೨) ಶೋಷಣೆಯ ಹಲವು ಸ್ತರಗಳನ್ನು **"ರೊಟ್ಟಿ"** ಕಥೆ ಹೇಗೆ ಚಿತ್ರಿಸುತ್ತದೆ? ವಿವರಿಸಿ.

೩) ಮನುವಿನ ರಾಣಿ ಯಾರು? ರಾಜಮ್ಮನಿಗೆ 'ರಾಣಿ' ಎಂಬ ಹೆಸರು ಬಂದಿರುವುದರ ಸಾರ್ಥಕತೆ ಏನು? ವಿಮರ್ಶಿಸಿ.

೪) 'ಮಾರಿಕೊಂಡವರು' ಕಥಾ ಶೀರ್ಷಿಕೆಯನ್ನು ವಿಮರ್ಶಿಸಿ.

ವಿಭಾಗ–ಸಿ

(ಗದ್ಯ ಸಂಪದ, ವಿಮರ್ಶೆ) (30 ಅಂಕಗಳು)

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ರಾಷ್ಟ್ರೀಯತೆಯ ನೆಲೆಯಲ್ಲಿ ಭಾರತದ ಸ್ಥಿತಿಯನ್ನು ವಿಶ್ಲೇಷಿಸಿ.

೨) ಗಿರಣಿಯ ವಿಸ್ತಾರ ನೋಡಯ್ಯಾ ಲೇಖನದ ಪ್ರಮುಖ ಆಶಯವನ್ನು ವಿಶದಪಡಿಸಿ.

ಪ್ರ8) <u>ಒಂದು</u> ವಿಷಯಕ್ಕೆ ಟಿಪ್ಪಣಿ ಬರೆಯಿರಿ. **[1×5=5]**

೧) ಕೆ.ವಿ. ಸುಬ್ಬಣ್ಣನವರ ಬದುಕು–ಬರಹಗಳನ್ನು ಪರಿಚಯಿಸಿ.

೨) ವೈಚಾರಿಕತೆಯ ಅಡೆತಡೆಗಳು

ಪ್ರ9) <u>ಒಂದು</u> ಪ್ರಶ್ನೆಗೆ ಉತ್ತರಿಸಿ. **[1×10=10]**

೧) 'ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ' ಲೇಖನದ ಸ್ವರೂಪ ಮತ್ತು ಮಹತ್ವ ಕುರಿತು ಬರೆಯಿರಿ.

೨) ಪ್ರಜ್ಞೆ ಮತ್ತು ಪರಿಸರ ಲೇಖನದ ಸ್ವರೂಪ ಮತ್ತು ವೈಶಿಷ್ಟ್ಯತೆಯನ್ನು ಕುರಿತು ಬರೆಯಿರಿ.

ಪ್ರ10)<u>ಒಂದು</u> ವಿಷಯಕ್ಕೆ ಟಿಪ್ಪಣಿ ಬರೆಯಿರಿ. **[1×5=5]**

೧) ಟಿ.ಎಸ್. ವೆಂಕಣ್ಣಯ್ಯ ಅವರ ಬದುಕು–ಬರಹಗಳನ್ನು ಕುರಿತು ಪರಿಚಯಿಸಿ.

೨) ಪ್ರಜ್ಞೆ ಮತ್ತು ಪರಿಸರ ಲೇಖನದ ಮಹತ್ವ.

